ಎಚ್.ಆರ್. ದೇಸಾಯಿ, ರಾಯಚೂರು
ಇರುವೆಯ ಕಣ್ಣಿಗೆ ಆನೆಯೂ, ಆನೆಯ ಕಣ್ಣಿಗೆ ಇರುವೆಯೂ ಕಾಣುತ್ತವೆಯೇ?




ಕ್ರಮವಾಗಿ ಟೆಲಿಸ್ಕೋಪ್ ಮತ್ತು ಮೈಕ್ರಾಸ್ಕೋಪ್ ಹಿಡಿದಾಗ ಕಾಣುತ್ತವಂತೆ!

ಎ.ಕೆ. ಪಟ್ಟಾಭಿ, ಬೆಂಗಳೂರು
ಹೆಣ್ಣು ಅಂದು ಅಬಲೆ, ಈಗ ಸಬಲೆ. ಒಟ್ಟಿನಲ್ಲಿ ಅವಳು ಎಂದಿಗೂ ಬಲೆಯೇ ಅಲ್ಲವೇ?
ನಿಜವೇ; ಗಂಡು mean ಆದಾಗ ಹಿಡಿದುಹಾಕಲು ಬೇಕೇಬೇಕಾದ ಬಲೆ!

ವಿದ್ಯಾಶಂಕರ ಹರಪನಹಳ್ಳಿ, ಬೆಂಗಳೂರು
ಧರ್ಮ ಮತ್ತು ಕಾನೂನಿನ ನಡುವೆ ಘರ್ಷಣೆ ಉದ್ಭವಿಸಿದಾಗ ಜನಸಾಮಾನ್ಯರು ಯಾವುದನ್ನು ಅನುಸರಿಸಬೇಕು?
ಮಾನವತೆಯನ್ನು.

ಕೆ.ಎಸ್. ನಾರಾಯಣರೆಡ್ಡಿ, ಕೆ.ಜಿ.ಎಫ್.
ಬೆಳೆಗೆ ಕಳೆ ಮಾರಕವಾದಂತೆ ಮನುಷ್ಯನ ವ್ಯಕ್ತಿತ್ವಕ್ಕೆ ಕಾಮ ಮಾರಕವಲ್ಲವೇ?
ಕಾಮಕ್ಕೆ ಒಂದು ಫುಲ್‌ಸ್ಟಾಪ್ ಇಟ್ಟರಾಯಿತು!

ಮಲ್ಲಿಕಾರ್ಜುನ ಗಚ್ಚಿ, ಯಾದಗಿರಿ
ವಿದ್ಯಾರ್ಥಿಯ ಜ್ಞಾನವರ್ಧನೆಯಲ್ಲಿ ಶಾಲೆಯಲ್ಲಿ ಹಾಕುವ ಬಿಸಿಯೂಟದ ಪಾತ್ರವೇನು?



ಅಜೀರ್ಣ ಹಾಗೂ ಕರುಳುಬೇನೆಗೆ ಕಾರಣಗಳನ್ನು ವಿವರಿಸಿ ಪ್ರಶ್ನೆಗೆ ಸೂಕ್ತವಾದ ಉತ್ತರ ಹೊಳೆಯುತ್ತದಂತೆ!

ಗೀತಾ ಬರ್ಲ, ಬೆಂಗಳೂರು
ಭಯೋತ್ಪಾದಕರಿಗೂ, ರಾಜಕಾರಣಿಗಳಿಗೂ ಏನು ವ್ಯತ್ಯಾಸ?
ಅವರು ಹಾಳಾಗಿರುತ್ತಾರೆ, ಇವರು ಧಾಳಾಗಿರುತ್ತಾರೆ.

ಮಲ್ಲಿಕಾರ್ಜುನ, ಸಾಂಗಲಿ
ಹಗಲಿನಲ್ಲಿ ಹೆಂಡತಿ ನೀರು ಕೇಳಿದರೆ ಕೊಡದೆ ಇರುಳಿನಲ್ಲಿ ಪ್ರೇಯಸಿ ಬೀರ್ ಕೇಳಿದರೆ ಕೊಡುವನಲ್ಲಾ ...?
ಆ ನೀರನ್ನು ನಶೆ ಇಳಿಸಲು ತಲೆಗೆ ಸುರಿದುಬಿಡುವಳೆಂಬ ಭಯವಂತೆ!

ವಿದ್ಯಾ ಎನ್. ಪೈ, ಹೊನ್ನಾವರ
ತಾಯಿ ಮಗಳಂತೆ ಇರುವ ಅತ್ತೆ ಸೊಸೆಯಂದಿರು ಕಡಿಮೆಯಾಗಲು ಕಾರಣವೇನು?
ಅತ್ತೆಯೂ ಬ್ಯೂಟಿಪಾರ್ಲರ್‌ಗೆ ಹೋಗುವುದು; ಈಗ ಅಕ್ಕ ತಂಗಿಯಂತೆ ಇರುತ್ತಾರೆ!

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
ಪ್ರಾಣಿಗಳಿಗಿರುವಷ್ಟು ಪ್ರಾಮಾಣಿಕತೆ ಮಾನವರಿಗೇಕಿಲ್ಲ ಸಾರ್?
ನೂರು ಸುಳ್ಳಿಗೆ ಒಂದು ಮದುವೆ; ಅವು ಮದುವೆಯಾಗದ್ದರಿಂದ ಪ್ರಾಮಾಣಿಕ!

ನಾರಾಯಣ, ಗುಗ್ಗರಹಟ್ಟಿ
ಅರ್ಧರಾತ್ರಿಯಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟುಹೋದ ಸಿದ್ಧಾರ್ಥನಿಗೆ ಹೇಡಿ ಎನ್ನದೆ ಭಗವಾನ್ ಎಂದರಲ್ಲಾ?
ಕತ್ತಲಲ್ಲಿ ಹೋದರೂ ಜಗತ್ತಿಗೇ ಬೆಳಕು ತಂದದ್ದರಿಂದ!

ಹಾಡ್ಯ ಜಯಾನಂದ, ಮೈಸೂರು
ಒಂದೇ ದಿನ ಶ್ರಾದ್ಧಕ್ಕೆ, ನಾಮಕರಣಕ್ಕೆ, ವಿವಾಹ ಸಮಾರಂಭಕ್ಕೆ ಆಮಂತ್ರಣವಿದ್ದಾಗ ನಿಮ್ಮ ಆದ್ಯತೆ ಯಾವುದಕ್ಕೆ?
ಶ್ರಾದ್ಧಕ್ಕೆ ಉಡುಗೊರೆ ನೀಡಬೇಕಿಲ್ಲವಲ್ಲ!

ರವೀಂದ್ರನಾಥ್ ಶಿ. ಯಡಹಳ್ಳಿ, ಬೀಳಗಿ
ಅಜ್ಞಾನಕ್ಕೂ, ವಿಜ್ಞಾನಕ್ಕೂ ಇರುವ ವ್ಯತ್ಯಾಸವೇನು?
ವಿಜ್ಞಾನಿಗೆ ಪ್ರಯೋಗ ಮುಖ್ಯ, ಅಜ್ಞಾನಿಗೆ ಪ್ರಯಾಗ ಮುಖ್ಯ!

ಸುಷ್ಮಾ ರಮೇಶ್ ಭೈರಣ್ಣ, ಬೀದರ್
ರಾಹುಲ್ ಗಾಂಧಿ ಹಿಂದೂಗಳಲ್ಲವೇ
ಹಿಂದೂ ಹೌದೋ ಅಲ್ಲವೋ, ಪಕ್ಷದಲ್ಲಂತೂ ಮುಂದು, ತಾತನಿಗೆ ಹೋಲಿಸಿದರೆ ಹಿಂದು!

ಜಾಫರ್ ಸಾಧಿಕ್, ಅಣಬೇರು
ಊರು, ಕೇರಿ, ಹುಡುಗಿ, ಬಿಂದಿಗೆ; ಇವುಗಳಲ್ಲಿ ಯಾವುದು ಶ್ರೇಷ್ಠ?
ಹುಡುಗಿಯೇ. ಅವಳಿಂದ ಮಿಕ್ಕ ಮೂರಕ್ಕೂ ಅರ್ಥ, ಸೊಬಗು!

## ಬಹುಮಾನಿತ ಪ್ರಶ್ನೆ

ಎಸ್. ವಸಂತಾ, ಕತ್ತರಗುಪ್ಪ
ನಾಮಕರಣವೆಂಬ ಸಂಸ್ಕೃತಿ ಇಲ್ಲದಿದ್ದರೆ ಏನಾಗುತ್ತಿತ್ತು?
ಹಿಟ್ಲರ್‌ನ ಸೆರೆಯಾಳುಗಳಿಗಿದ್ದಂತೆ ಬರೀ ಸಂಖ್ಯೆಗಳೇ ಇರುತ್ತಿದ್ದವು.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
ಸತ್ಯಂ, ಶಿವಂ, ಸುಂದರಂ...... ನಂತರ?
ಝೀನತ್ ಅಮಾನ್‌ಗೆ ಡಿಮ್ಯಾಂಡ್ ಹೆಚ್ಚಾಯಿತು!

ವಿಜಯ್ ಕೆ. ವಿಭೂತಿ, ಹರಿಹರ
ಎಷ್ಟೇ ಕೀರ್ತಿ, ಸಂಪತ್ತು ಸಾಧನೆಗಳಿದ್ದರೂ ವ್ಯಕ್ತಿ ಸತ್ತಾಕ್ಷಣ ದೇಹವನ್ನು ಹೊರಗಿಡುವರಲ್ಲಾ, ಏಕೆ?
ಕೊಂಚ ಕಾಲ ಇಟ್ಟರೆ ಹೆಣಕ್ಕೂ ತನ್ನ ವಾಸನೆ ತಡೆಯಲಾರದೆ ಎದ್ದುಹೋಗಿಬಿಡುವುದರಿಂದ!

ಹೆಚ್. ಆರ್. ಕಡಿವಾಲ, ಬಾದಾಮಿ
ಶಕ್ತಿಪ್ರದರ್ಶನ ಕ್ರೀಡೆಗಳು ನಶಿಸಲು ಕಾರಣವೇನು?
ನಶಿಸಿಲ್ಲ ಸಾರ್! ವಿಧಾನಸೌಧದಲ್ಲಿ ಪ್ರತಿ ಸೆಷನ್ ನಲ್ಲೂ ನಡೆಯುವುದು ಅದೇ!

ಮ. ಶಿವಸ್ವಾಮಿ ಕರೋಹಟ್ಟಿಕರ್, ಬೆಂಗಳೂರು
ಹೊಸತನ ನೀಡುವ ಹೊಸ ವರುಷದ ಶುಭಾಶಯಗಳೇನು?




ಕ್ಯಾಲೆಂಡರಿನಲ್ಲಿ ಎರಡು ಬಾರಿ ಮೂರು ನಾಮಗಳು ಬಂದರೂ ನಿಮಗೆ ನಾಮ ಹಾಕುವವರು ಬಾರದಿರಲಿ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಹೆಣ್ಣಿಗೆ ಅಂದ ಕೊಟ್ಟು, ಗಂಡಿಗೆ ಆಸೆ ಇಟ್ಟವರು ಯಾರು ಸಾರ್?
ಬ್ಯೂಟಿ ಪಾರ್ಲರ್‌ನವರು!

■ ರಾಮ್